## 'ಹುಬ್ಬಳ್ಳಿ- ಅಂಕೋಲಾ ರೈಲು ಮಾರ್ಗ; ಅಡಚಣೆ ನಿವಾರಣೆ

# 'ಐಐಎಸ್‌ಸಿ' ಶಿಫಾರಸಿಗೆ ಒಪ್ಪಿಗೆ

**ಶ್ರೀಪಾದ ಜೋಶಿ**

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಉತ್ತರ ಕರ್ನಾಟಕದ ಹಲವು ದಶಕದ ಕನಸಾದ ಹುಬ್ಬಳ್ಳಿ- ಅಂಕೋಲಾ ರೈಲು ಮಾರ್ಗ ನನಸಾಗಲು ಇದ್ದ ಅಡೆ-ತಡೆ ಬಹುಮಟ್ಟಿಗೆ ನಿವಾರಣೆಯಾಗಿದೆ.

ಪಶ್ಚಿಮ ಘಟ್ಟಗಳನ್ನು ಯುನೆಸ್ಕೊ ಇತ್ತೀಚೆಗೆ ವಿಶ್ವ ಪರಂಪರೆ ಪಟ್ಟಿಗೆ ಸೇರಿಸಿದ್ದರೂ ಈ ಮಾರ್ಗ ಹಾದುಹೋಗಲಿರುವ ಉತ್ತರ ಕನ್ನಡದ ಯಾವುದೇ ಭಾಗ ಸದ್ಯಕ್ಕೆ ಆ ಪಟ್ಟಿಯಲ್ಲಿಲ್ಲ. ಯೋಜನೆ ಜಾರಿಗೆ ಸದ್ಯಕ್ಕಂತೂ ಯಾವುದೇ ಅಡ್ಡಿ ಆತಂಕಗಳಿಲ್ಲ ಎಂಬುದು ಹುಬ್ಬಳ್ಳಿ ನೈರುತ್ಯ ರೈಲ್ವೆ ವಲಯ ಅಧಿಕಾರಿಗಳ ಅನಿಸಿಕೆ.

ಪಶ್ಚಿಮ ಘಟ್ಟದ ಜೀವ ವೈವಿಧ್ಯಕ್ಕೆ ತೊಂದರೆಯಾಗಲಿದೆ ಎಂಬ ಅಂಶವನ್ನು ಮುಂದಿಟ್ಟುಕೊಂಡು ಈ ಯೋಜನೆಯನ್ನು ಕೈಬಿಡುವಂತೆ ಪರಿಸರವಾದಿಗಳು ಇಲಾಖೆ ಮೇಲೆ ಒತ್ತಡ ಹೇರುತ್ತಿದ್ದಾರೆ. ಹೀಗಾಗಿ ಪರ್ಯಾಯ ಮಾರ್ಗಗಳನ್ನು ಕಂಡುಕೊಳ್ಳಲು ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆ (ಐಐಎಸ್‌ಸಿ) ಎಂಜಿನಿಯರುಗಳನ್ನು ಒಳಗೊಂಡ ಸಮಿತಿ ರಚಿಸಲಾಗಿತ್ತು. ಸಮಿತಿಯು 2011ರ ಡಿಸೆಂಬರ್ 9ರಂದು ಕೇಂದ್ರೀಯ ಉನ್ನತಾಧಿಕಾರ ಸಮಿತಿಗೆ ವರದಿ ಸಲ್ಲಿಸಿದೆ. ವರದಿಯ ಶಿಫಾರಸು ಅಳವಡಿಸಿಕೊಂಡು ಯೋಜನೆ ಜಾರಿಗೆ ತಂದರೆ ಖರ್ಚು ಇನ್ನಷ್ಟು ಹೆಚ್ಚಾಗುವ ಸಾಧ್ಯತೆ ಇದೆಯಾದರೂ ಅದು ಪರಿಸರ ಸ್ನೇಹಿ ಆಗುತ್ತದೆ.

ಯೋಜನೆ ಅನುಷ್ಠಾನಕ್ಕೆ ಭಾರತೀಯ ವಿಜ್ಞಾನ ಸಂಸ್ಥೆಯು ಮೂರು ಪ್ರಮುಖ ಶಿಫಾರಸುಗಳನ್ನು ಮಾಡಿದೆ. ಉದ್ದೇಶಿತ ಮಾರ್ಗದ 76 ರಿಂದ 86 ಕಿ.ಮೀವರೆಗಿನ ಮಾರ್ಗ ಬದಲಿಸಿ ರಾಷ್ಟ್ರೀಯ ಹೆದ್ದಾರಿ 63ರ ಉದ್ದಕ್ಕೂ ಹಳಿ ಹಾಕುವುದು, ದಟ್ಟ ಅರಣ್ಯ ನಾಶ ತಡೆಗಾಗಿ 86ರಿಂದ 100 ಕಿ.ಮೀವರೆಗೆ ಹಾಗೂ ಪದೇ ಪದೇ ಮಣ್ಣು ಕುಸಿಯುವ ಭಾಗವಾದ 114 ರಿಂದ 134 ಕಿ.ಮೀವರೆಗೆ ಮಾರ್ಗ ಬದಲಾವಣೆಗೆ ಶಿಫಾರಸು ಮಾಡಿದೆ. ಮೊದಲೆರಡು ಶಿಫಾರಸು ಅಳವಡಿಕೆಗೆ ಇಲಾಖೆ ಒಪ್ಪಿದ್ದು ಮೂರನೇ ಶಿಫಾರಸಿಗೆ ಸಂಬಂಧಿಸಿದ ಭಾಗದಲ್ಲಿ 12 ಕಿ.ಮೀ ಸುರಂಗ ಮಾರ್ಗ ನಿರ್ಮಿಸಬೇಕಾದ್ದರಿಂದ ಇದನ್ನು ಕಾರ್ಯಗತಗೊಳಿಸಲಾಗದು ಎಂದು ಹೇಳಿದೆ.

ಈ ಪ್ರದೇಶದಲ್ಲಿ ಆನೆಗಳ ಸರಾಗ ಓಡಾಟಕ್ಕೆ ಅನುಕೂಲವಾಗುವಂತೆ 12.20 ಮೀಟರ್ ಅಳತೆಯ 'ಆನೆ ಪಥ' (ಕಾರಿಡಾರ್) ನಿರ್ಮಿಸಲಾಗುತ್ತಿದೆ.

ಈ ಎಲ್ಲ ಕ್ರಮಗಳಿಂದಾಗಿ ಸುಮಾರು 60 ಹೆಕ್ಟೇರ್‌ನಷ್ಟು ಅರಣ್ಯ ಪ್ರದೇಶ ಸ್ವಾಧೀನ ತಪ್ಪುತ್ತದೆ. ಸುರಂಗ ಮಾರ್ಗದ ಉದ್ದ ಮಾತ್ರ 208 ಮೀಟರ್‌ನಷ್ಟು ಹೆಚ್ಚಾಗುತ್ತದೆ. ಇದಕ್ಕೆ ಹೆಚ್ಚುವರಿಯಾಗಿ ರೂ 181.49 ಕೋಟಿ ಖರ್ಚಾಗಲಿದೆ ಎಂದು ರೈಲ್ವೆ ಇಲಾಖೆ ತಿಳಿಸಿದೆ.

ಐಐಎಸ್‌ಸಿ ಶಿಫಾರಸಿನ ಹಿನ್ನೆಲೆಯಲ್ಲಿ ಬೆಂಗಳೂರಿನಲ್ಲಿ ಡಿಸೆಂಬರ್ 31ರಂದು ರಾಜ್ಯ ಸರ್ಕಾರದ ಹೆಚ್ಚುವರಿ ಕಾರ್ಯದರ್ಶಿಗಳ ನೇತೃತ್ವದಲ್ಲಿ ಸಭೆ ನಡೆಯಿತು. ಐಐಎಸ್‌ಸಿ ಶಿಫಾರಸುಗಳಿಗೆ ರೈಲ್ವೆ ಒಪ್ಪಿರುವ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರದ ಮೂಲಸೌಕರ್ಯ ಅಭಿವೃದ್ಧಿ ಇಲಾಖೆ ಪ್ರಧಾನ ಕಾರ್ಯದರ್ಶಿಯವರು ಕೇಂದ್ರ ಸರ್ಕಾರದ ಪರಿಸರ ಮತ್ತು ಅರಣ್ಯ ಇಲಾಖೆ ಮತ್ತು ರಾಜ್ಯ ಸರ್ಕಾರಕ್ಕೆ ಪತ್ರ ಬರೆದು ಆದಷ್ಟು ಬೇಗ ನಿರಾಕ್ಷೇಪಣಾ ಪತ್ರ ನೀಡಲು ಕೋರಿದ್ದಾರೆ.

'ಉತ್ತರಕನ್ನಡ ಜಿಲ್ಲೆಯ ಅಘನಾಶಿನಿ ಮತ್ತು ದಾಂಡೇಲಿ ಅಭಯಾರಣ್ಯದ ಭಾಗವಾದ ಅಣಶಿ ಪಾರ್ಕ್ ಚಿರತೆ, ಕಪ್ಪು ಚಿರತೆ, ಆನೆ, ಮಂಗಗಳು, ವಿವಿಧ ಜಾತಿಯ ಸರೀಸೃಪಗಳು, ವಿವಿಧ ಜಾತಿಯ ಸಸ್ಯ ಸಂಕುಲವನ್ನು ಹೊಂದಿದ್ದು ಈ ಭಾಗವೂ ಯುನೆಸ್ಕೋ ಪಟ್ಟಿಯಲ್ಲಿ ಸೇರಬೇಕು. ಇದರ ಜತೆಗೆ ಗೋವಾ ರಾಜ್ಯದ ಕೆಲವು ಭಾಗಗಳು ಈ ಪಟ್ಟಿಯಲ್ಲಿ ಸೇರಬೇಕಿವೆ. ಈ ಬಗ್ಗೆ ಯುನೆಸ್ಕೋಗೆ ಪತ್ರ ಬರೆದಿದ್ದೇನೆ' ಎನ್ನುತ್ತಾರೆ ಪರಿಸರವಾದಿ ಜಗದೀಶ ಕೃಷ್ಣಸ್ವಾಮಿ.

ಉದ್ದೇಶಿತ ರೈಲು ಮಾರ್ಗದಲ್ಲಿ ಬರುವ ಪ್ರದೇಶಗಳು ಸಹ ವಿಶ್ವ ಪರಂಪರೆ ತಾಣಗಳ ಪಟ್ಟಿಗೆ ಸೇರಿದರೂ ಪರಿಸರಕ್ಕೆ, ವನ್ಯಜೀವಿಗಳಿಗೆ ತೊಂದರೆಯಾಗದಂತೆ ಕ್ರಮ ಕೈಗೊಳ್ಳಬಹುದು ಎಂದು ರೈಲ್ವೆ ಮೂಲಗಳು ತಿಳಿಸಿವೆ.